ಲಂಚ ಪ್ರಕರಣದಲ್ಲಿ ಸಿಲುಕಿ ಅಮಾನತ್ತುಗೊಂಡ ಅಧಿಕಾರಿಗಳು

1. ಶ್ರೀ ಎ.ಮರಿಗೌಡ, ಕೆಎಎಸ್ (ಕಿ.ಶ್ರೇ.) ಇವರನ್ನು ದಿ: 24.07.09ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದು, ಇನ್ನೂ ಅಮಾನತ್ತಿನಲ್ಲಿಯೇ ಮುಂದುವರಿದಿರುತ್ತಾರೆ.

ಲೋಕಾಯುಕ್ತ ದಾಳಿಗೆ ಒಳಗಾಗಿ ಅಮಾನತ್ತುಗೊಳಿಸದೆ ಇರುವ ಅಧಿಕಾರಿಗಳು

1. ಶ್ರೀ ವೈ ಎಂ.ರಾಮಚಂದ್ರಮೂರ್ತಿ, ಕೆಎಎಸ್, (ಕಿ.ಶ್ರೇ) ಅಧಿಕಾರಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲು ಲೋಕಾಯುಕ್ತರು ಶಿಫಾರಸ್ಸು ಮಾಡಿದ್ದು, ಪ್ರಸ್ತಾವನೆಯ ಪರಿಶೀಲನೆಯಲ್ಲಿರುತ್ತದೆ.

ಮುಜರಾಯಿ ದೇವಸ್ಥಾನಗಳು

417 ಶ್ರೀ ಪುಟ್ಟರಾಜು ಸಿ.ಎಸ್ : ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು;(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ತಸ್ತೀಕ್ ರೂಪದಲ್ಲಿ ಸಂಬಳವನ್ನು ಪಡೆಯುತ್ತಿರುವ ಅರ್ಚಕರ ಸಂಖ್ಯೆ ಎಷ್ಟು; ಪ್ರತಿ ಅರ್ಚಕರಿಗೆ ಪ್ರತಿ ತಿಂಗಳಿಗೆ ನೀಡುತ್ತಿರುವ ತಸ್ತೀಕ್ ಎಷ್ಟು; ಹಾಗೂ ಸರ್ಕಾರ ಪ್ರತಿ ವರ್ಷ ಭರಿಸುವ ಹಣವೆಷ್ಟು;

ಇ) ದೇವಸ್ಥಾನದ ಆದಾಯದ ಮೂಲದಿಂದ ಸಂಬಳದ ರೂಪದಲ್ಲಿ ಪ್ರತಿ ತಿಂಗಳು ಹಣ ಪಡೆಯುತ್ತಿರುವ ಅರ್ಚಕರ ಸಂಖ್ಯೆ ಎಷ್ಟು; ಇವರು ಪ್ರತಿ ವರ್ಷ ಪಡೆಯುತ್ತಿರುವ ವೇತನದ ಮೊತ್ತವೆಷ್ಟು;

ಈ) ತಸ್ತೀಕ್ ರೂಪದಲ್ಲಿ ಹಾಗೂ ಆದಾಯದ ಮೂಲದ ದೇವಸ್ಥಾನದಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಚಕರ ಸಂಭಾವನೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ವಿ.ಎಸ್. ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) :

ಅ) ಒಟ್ಟು 34.210.

ಜಿಲ್ಲಾವಾರು ವಿವರಗಳನ್ನು ಅನುಬಂಧ (1) ರಲ್ಲಿ ನೀಡಿದೆ.

ಆ) ಒಟ್ಟು 31275.

ಅರ್ಚಕರಿಗೆ ಪ್ರತಿ ತಿಂಗಳಿಗೆ ರೂ, 500/–ಗಳಂತೆ ವಾರ್ಷಿಕವಾಗಿ ಪ್ರತಿ ವರ್ಷ ರೂ. 18,76,50,000/–ಗಳನ್ನು ಭರಿಸಲಾಗುತ್ತಿದೆ.

ಜಿಲ್ಲಾವಾರು ವಿವರವನ್ನು ಅನುಬಂಧ (2) ರಲ್ಲಿ ನೀಡಿದೆ.

ಇ) ಒಟ್ಟು 3308.

ಇವರುಗಳು ಪ್ರತಿ ವರ್ಷ ಪಡೆಯುತ್ತಿರುವ ವೇತನದ ಮೊತ್ತ ರೂ. 1,74,58,200–00ಗಳು.

ಜಿಲ್ಲಾವಾರು ವಿವರಗಳನ್ನು ಅನುಬಂಧ (2)ರಲ್ಲಿ ನೀಡಿದೆ.

ಈ) ಇಲ್ಲ.

ಅನುಬಂಧ–1

ಕ್ರ. ಸಂ.	ಜಿಲ್ಲೆಗಳ ವಿವರ	ಸಂಸ್ಥೆಗಳ ವಿವರ	ಹೊರತು ಪಡಿಸುವುದು	ಸೇರ್ಪಡೆ	ಒಟ್ಟು ಸಂಸ್ಥೆಗಳ ಸಂಸ್ಥೆ
1	ಬೆಂಗಳೂರು ನಗರ	1016	0		
2	ಬೆಂಗಳೂರು ಗ್ರಾಮಾಂತರ	1078	0		
3	ಬಾಗಲಕೋಟೆ	1167	0		
4	ಬೆಳಗಾವಿ	3803	1		
5	ಬಳ್ಳಾರಿ	1294	0		
6	ಬೀದರ್	533	0		
7	ಬಿಜಾಪುರ	552	0		
8	ಚಾಮರಾಜ ನಗರ	414	0		
9	ಚಿಕ್ಕಮಗಳೂರು	869	0		
10	ಚಿತ್ರದುರ್ಗ	305	0		
11	ದಾವಣಗರೆ	612	0		
12	ದಕ್ಷಿಣ ಕನ್ನಡ	481	3		
13	ಧಾರವಾಡ	938	4	2	

14	ಗದಗ್	1382	0		
15	ಗುಲ್ಬರ್ಗಾ	2838	0		
16	ಹಾಸನ	2443	0		
17	ತುಮಕೂರು	2462	1		
18	ಹಾವೇರಿ	1288	0		
19	ಕೊಡಗು	7	0		
20	ಕೋಲಾರ	1756	0		
21	ಕೊಪ್ಪಳ	736	1	1	
22	ಮಂಡ್ಯ	2008	0		
23	ಮೈಸೂರು	1312	1		
24	ರಾಯಚೂರು	1287	0		
25	ಉಡುಪಿ	812	9	1	
26	ಉತ್ತರ ಕನ್ನಡ	769	75		
27	ಶಿವಮೊಗ್ಗ	643	0		
28	ರಾಮನಗರ	863	0		
29	ಚಿಕ್ಕಬಳ್ಳಾಪುರ	633	0		
	ಒಟ್ಟು	**34301**	**95**	**4**	**34210**

ಅನುಬಂಧ–2

ಕ್ರ. ಸಂ.	ಜಿಲ್ಲೆ	ಆ		ಇ	
		ಅರ್ಚಕರ ಸಂಖ್ಯೆ	ಮೊತ್ತ	ದೇವಸ್ಥಾನದ ನಿಧಿಯಿಂದ ಪಾವತಿಸುವ ಅರ್ಚಕರ ಸಂಖ್ಯೆ	ಮೊತ್ತ
1	ಬೆಂಗಳೂರು ನಗರ	956	500.00	125	27,84,060.00
2	ಬೆಂಗಳೂರು ಗ್ರಾಮಾಂತರ	1053	500.00	25	2,79,600.00

3	ಬಾಗಲಕೋಟೆ	1154	500.00	–	–
4	ಬೆಳಗಾವಿ	2128	500.00	14	3,36,000.00
5	ಬಳ್ಳಾರಿ	532	500.00	14	1,53,600.00
6	ಬಿಜಾಪುರ	1421	500.00	–	–
7	ಬೀದರ್	273	500.00	18	2,16,000.00
8	ಚಾಮರಾಜ ನಗರ	163	500.00	40	9,87,075.00
9	ಚಿಕ್ಕಮಗಳೂರು	858	500.00	34	1,92,550.00
10	ಚಿಕ್ಕಬಳ್ಳಾಪುರ	976	500.00	33	4,00,460.00
11	ಚಿತ್ರದುರ್ಗ	286	500.00	63	1,01,100.00
12	ದಕ್ಷಿಣ ಕನ್ನಡ	476	500.00	1200	38,40,000.00
13	ದಾವಣಗೆರೆ	505	500.00	53	5,89,300.00
14	ಧಾರವಾಡ	636	500.00	–	–
15	ಗದಗ	783	500.00	–	–
16	ಗುಲ್ಬರ್ಗಾ	916	500.00	141	1,08,000.00
17	ಹಾಸನ	3335	500.00	40	5,30,244.00
18	ಹಾವೇರಿ	605	500.00	7	25,680.00
19	ಕೋಲಾರ	1265	500.00	50	7,82,179.00
20	ಕೊಡಗು	–	500.00	12	17,560.00
21	ಕೊಪ್ಪಳ	816	500.00	18	5,49,140.00
22	ಮಂಡ್ಯ	3624	500.00	58	5,61,180.00
23	ಮೈಸೂರು	1248	500.00	60	30,81,216.00
24	ರಾಮನಗರ	1090	500.00	13	1,50,360.00
25	ರಾಯಚೂರು	1282	500.00	13	4,00,000.00
26	ಶಿವಮೊಗ್ಗ	437	500.00	73	6,82,000.00
27	ತುಮಕೂರು	3201	500.00	48	5,52,600.00
28	ಉಡುಪಿ	1016	500.00	927	1,38,296.00
29	ಉತ್ತರ ಕನ್ನಡ	240	500.00	–	–
	ಒಟ್ಟು	**31275**	**14500.00**	**3308**	**1,74,58,200.00**

ಷರಾ:–			
1)	31275 ಅರ್ಚಕರಿಗೆ ಮಾಸಿಕ ರೂ.500/–ರಂತೆ ವಾರ್ಷಿಕವಾಗಿ ತಗಲುವ ವೆಚ್ಚ 31275x 500x12		ರೂ.18,76,50,000–00 (ಮಾಸಿಕ ರೂ.15,637,500)
2)	ಎ)	ದೇವಸ್ಥಾನದ ಆದಾಯದ ಮೂಲದಿಂದ ಸಂಬಳದ ಮೂಲದಿಂದ ಪ್ರತಿ ತಿಂಗಳು ಹಣ ಪಡೆಯುತ್ತಿರುವ ಅರ್ಚಕರ ಸಂಖ್ಯೆ	3308
	ಬಿ)	ಇವರು ಪಡೆಯುತ್ತಿರುವ ವೇತನ ಮೊತ್ತ	ರೂ. 1,74,58,200–00

435 ಶ್ರೀ ಬಂಡೆಪ್ಪ ಕಾಶ್ಯಂಪೂರ್ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಬೆಳೆ ವಿಮೆಗಾಗಿ ಬಿಡುಗಡೆ ಮಾಡಲಾದ ಹಣ ಎಷ್ಟು; ಇದರ ಅನುಕೂಲ ಪಡೆದ ರೈತ ಕುಟುಂಬಗಳ ಶೇಕಡಾವಾರು ಪ್ರಮಾಣವೆಷ್ಟು (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು) ;

ಆ) ಬೆಳೆ ವಿಮೆ ಪರಿಹಾರವನ್ನು ಹೆಚ್ಚಿನ ರೈತರಿಗೆ ನೀಡದಿರುವುದು ಸರ್ಕಾರದ ಗನಮಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎ.ರವೀಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಪಾಲ್ಗೊಂಡ ರೈತರ, ಫಲಾನುಭವಿ ರೈತರ, ಅನುಕೂಲ ಪಡೆದ ರೈತ ಕುಟುಂಬವಾರು ಶೇಕಡಾವಾರು ಪ್ರಮಾಣ ಹಾಗೂ ಬೆಳೆ ವಿಮಾ ನಷ್ಟ ಪರಿಹಾರದ ವಿವರಗಳು ಈ ಕೆಳಕಂಡಂತಿದೆ.